ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಜಂ ನಿ : ಸುಮಪ : 2020–21 ದಿನಾಂಕ : 04–01–2021

# ಮಾಧ್ಯಮ ಆಮಂತ್ರಣ

1) ಸರ್ಕಾರಿ ಪಡಿತರ ವಿತರಕರ ಕ್ಯಾಲೆಂಡರ್ ಹಾಗೂ ಸಮ್ಮೇಳನ ಸಂಚಿಕೆ ಬಿಡುಗಡೆ :

ಕೆ. ಗೋಪಾಲಯ್ಯ, ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು

ದಿನಾಂಕ : 05–01–2021 ಮಂಗಳವಾರ ಸಮಯ : ಬೆಳಿಗ್ಗೆ 11–00 ಗಂಟೆಗೆ

ಸ್ಥಳ : ರವೀಂದ್ರ ಕಲಾಕ್ಷೇತ್ರ, ಬೆಂಗಳೂರು

## ಪತ್ರಿಕಾ ಪ್ರಕಟಣೆ

### ಕರ್ನಾಟಕ ವಿಧಾನ ಮಂಡಳದ ಮೌಲ್ಯಗಳನ್ನು ಎತ್ತಿ ಹಿಡಿಯಲು ಸಮಾಲೋಚನಾ ಸಭೆ

**ಬೆಂಗಳೂರು, ಜನವರಿ 04 (ಕರ್ನಾಟಕ ವಾರ್ತೆ):**

ಕರ್ನಾಟಕದ ವಿಧಾನ ಮಂಡಳದ ವ್ಯವಸ್ಥೆಗೆ ಒಂದು ವಿಶಿಷ್ಟ ಇತಿಹಾಸವಿದೆ. ಇಡೀ ದೇಶಕ್ಕೆ ಮಾದರಿ ವಿಧಾನ ಮಂಡಲವನ್ನು ನೀಡಿದ ರಾಜ್ಯ ಕರ್ನಾಟಕ. ಡಿಸೆಂಬರ್ 15 ರಂದು ವಿಧಾನ ಪರಿಷತ್ತಿನಲ್ಲಿ ನಡೆದ ಘಟನೆ ಸಂಸದೀಯ ವ್ಯವಸ್ಥೆಯನ್ನೇ ತಲ್ಲಣಗೊಳಿಸುವ ಘಟನೆಯಾಗಿದೆ. ಈ ಸಂಬಂಧ ಮುಂದಿನ ದಿನಗಳಲ್ಲಿ ಅಧಿವೇಶನಕ್ಕೂ ಮುನ್ನ ಸಾಮಾಜಿಕ ಚಿಂತಕರು, ತಜ್ಞರು, ಹಿರಿಯರು ಹಾಗೂ ಮಾಧ್ಯಮ ಪ್ರತಿನಿಧಿಗಳನ್ನು ಒಳಗೊಂಡಂತೆ ಸಮಾಲೋಚನಾ ಸಭೆಯನ್ನು ಕರೆದು ಚರ್ಚಿಸುವುದಾಗಿ ಕರ್ನಾಟಕ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಮಾಧ್ಯಮದವರಿಗೆ ಇಂದು ಇಲ್ಲಿ ತಿಳಿಸಿದರು.

ದಿವಂಗತ ಎಸ್.ಎಲ್. ಧರ್ಮೇಗೌಡರಿಗೆ ಶ್ರದ್ಧಾಂಜಲಿ ಸಲ್ಲಿಸಿದ ವಿಧಾನಸಭಾಧ್ಯಕ್ಷರು ಅವರು ಧರ್ಮೇಗೌಡರು ಗ್ರಾಮಪಂಚಾಯತಿ ಒಳಗಂಡಂತೆ ಎಂಎಲ್ಎ, ಎಂಎಲ್‌ಸಿ, ಮುಂತಾದ ಹಿರಿಯ ಸ್ಥಾನಗಳನ್ನು

ಅಲಂಕರಿಸಿದವರು. ಅವರ ಅನಿರೀಕ್ಷಿತ ಸಾವು ಆಘಾತ ನೀಡಿದೆ. ಅವರ ನಿಧನದಿಂದ ಅವರ ಕುಟುಂಬದವರಿಗೆ ಆಗಿರುವ ದು : ಖವನ್ನು ಭರಿಸುವ ಶಕ್ತಿ ಭಗವಂತನು ನೀಡಲಿ ಎಂದು ತಿಳಿಸಿದರು.

ವಿಧಾನ ಪರಿಷತ್ತಿನಲ್ಲಿ ನಡೆದ ಘಟನೆಯಿಂದಾಗಿ ಲೋಕಸಭಾಧ್ಯಕ್ಷ ತೀವ್ರ ದಿಭ್ರಮೆ ವ್ಯಕ್ತಪಡಿಸಿದ್ದಾರೆ. ಈ ಘಟನೆಯ ಹಿನ್ನೆಲೆಯಲ್ಲಿ ಇಡಿ ದೇಶದ ಗಣ್ಯರು, ರಾಜ್ಯದ ಗಣ್ಯರು, ಹಿರಿಯರು, ಮಾಧ್ಯಮದವರು ಖೇದವನ್ನು ವ್ಯಕ್ತಪಡಿಸಿದ್ದಾರೆ. ಜವಾಬ್ದಾರಿಯುತ ವ್ಯಕ್ತಿಗಳಾದ ನಾವು ಪ್ರಜಾಪ್ರಭುತ್ವದ ವ್ಯವಸ್ಥೆಯನ್ನು ಎತ್ತಿ ಹಿಡಿಯುವ ಕಾರ್ಯವನ್ನು ಮಾಡಬೇಕು. ಆದರೆ, ಈ ಘಟನೆಯಿಂದಾಗಿ ಪ್ರಜಾಪ್ರಭುತ್ವದ ಮೌಲ್ಯದಲ್ಲಿ ಕುಸಿತ ಉಂಟಾಗಿದೆ. ಈ ಸಂಬಂಧ ನಾವೆಲ್ಲರೂ ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ ಎಂದು ಕರ್ನಾಟಕ ವಿಧಾನಸಭಾಧ್ಯಕ್ಷರು ತಿಳಿಸಿದರು.

## ಸುವರ್ಣ ಆರೋಗ್ಯ ಸುರಕ್ಷಾಟ್ರಸ್ಟ್ ಕಛೇರಿ ಸ್ಥಳಾಂತರ

**ಬೆಂಗಳೂರು, ಜನವರಿ 04 (ಕರ್ನಾಟಕ ವಾರ್ತೆ):**

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಂಗ ಸಂಸ್ಥೆಯಾದ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಕಛೇರಿಯು ಈ ಹಿಂದೆ ಬೆಂಗಳೂರಿನ ಶಾಂತಿನಗರದಲ್ಲಿರುವ ಬಿಎಂಟಿಸಿ ಸಂಕೀರ್ಣದ ಟಿಟಿಎಂಸಿ 'ಎ' ಬ್ಲಾಕ್‌ನ 4ನೇ ಮಹಡಿಯಲ್ಲಿ ಕಾರ್ಯನಿರ್ವಹಿಸುತ್ತಿತ್ತು. ಈಗ ಸುವರ್ಣ ಆರೋಗ್ಯ ಸುರಕ್ಷಾಟ್ರಸ್ಟ್ ಕಛೇರಿಯು ಬೆಂಗಳೂರಿನ ಮಾಗಡಿ ರಸ್ತೆಯಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ 'ಆರೋಗ್ಯ ಸೌಧ' ದ 7ನೇ ಮಹಡಿಗೆ ಸ್ಥಳಾಂತರಗೊಂಡಿರುತ್ತದೆ.

ಸಾರ್ವಜನಿಕ ಭೇಟಿ ಹಾಗೂ ಆಡಳಿತಾತ್ಮಕ ವ್ಯವಹಾರಗಳಿಗೆ ಇನ್ನು ಮುಂದೆ ಮಾಗಡಿ ರಸ್ತೆಯಲ್ಲಿರುವ ಆರೋಗ್ಯ ಸೌಧ ಕಟ್ಟಡದ 7ನೇ ಮಹಡಿ, ಬೆಂಗಳೂರು-560023, ದೂರವಾಣಿ ಸಂಖ್ಯೆ: 080-22536200 ನ್ನು ಸಂಪರ್ಕಿಸಬಹುದು.

## ಸರಕುಗಳ ಮಾರಾಟದ ಬಿಲ್ಲುಗಳನ್ನು ನೀಡದ ವರ್ತಕರಿಂದ ರೂ.16.80 ಲಕ್ಷ ದಂಡ ಸಂಗ್ರಹ

**ಬೆಂಗಳೂರು, ಜನವರಿ 04 (ಕರ್ನಾಟಕ ವಾರ್ತೆ):** ವಾಣಿಜ್ಯ ತೆರಿಗೆಗಳ ಇಲಾಖೆಯು ಬೆಂಗಳೂರಿನ ದಕ್ಷಿಣ ವಲಯದ ಜಾರಿ ಅಧಿಕಾರಿಗಳು ಡಿಸೆಂಬರ್ 2020 ರಲ್ಲಿ ಬೆಂಗಳೂರಿನ ವಿವಿಧ ಸ್ಥಳಗಳಲ್ಲಿ 150 ವರ್ತಕರ ವ್ಯಾಪಾರ ಸ್ಥಳಕ್ಕೆ ಭೇಟಿ ನೀಡಿ, ಪರೀಕ್ಷಾರ್ಥ ಖರೀದಿ ನಡೆಸಿದ ಸಂದರ್ಭದಲ್ಲಿ 113 ವರ್ತಕರು ಸದರಿ ಮಾರಾಟಕ್ಕೆ ಸೂಕ್ತ ಮಾರಾಟದ ಬಿಲ್ಲುಗಳನ್ನು ನೀಡದ ಕಾರಣ 84 ವರ್ತಕರಿಂದ ರೂ.16.80 ಲಕ್ಷ ದಂಡವನ್ನು

**ಸಂಗ್ರಹಿಸಲಾಗಿದೆ. ಉಳಿಕೆ 29 ವರ್ತಕರಿಂದ ರೂ.5.80 ಲಕ್ಷ ದಂಡವನ್ನು ವಸೂಲಿ ಮಾಡಲು ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.**

**ರಾಜ್ಯದ ಎಲ್ಲಾ ನೊಂದಾಯಿತ ವರ್ತಕರುಗಳು ಇನ್ನು ಮುಂದೆ ತಮ್ಮ ಮಾರಾಟದ ಮೇಲೆ ಸೂಕ್ತ ಮಾರಾಟದ ಬಿಲ್ಲುಗಳನ್ನು ತಪ್ಪದೇ ನೀಡುವಂತೆ ಸೂಚಿಸಿದೆ. ಮುಂದಿನ ದಿನಗಳಲ್ಲಿ ಪರೀಕ್ಷಾರ್ಥ ಖರೀದಿ ಪ್ರಕ್ರಿಯೆಯನ್ನು ಮುಂದುವರೆಸಲು ಉದ್ದೇಶಿಸಿದ್ದು, ಈ ಸಂದರ್ಭದಲ್ಲಿ ವರ್ತಕರುಗಳು ಸರಕುಗಳ ಮಾರಾಟದ ವಾಣಿಜ್ಯ ತೆರಿಗೆಗಳ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.**

ಸಹಕಾರ ಸಂಘ/ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗಾಗಿ

## ಆರು ತಿಂಗಳ ದೂರಶಿಕ್ಷಣ ಡಿಪ್ಲೊಮಾ ಇನ್ ಕೋ ಆಪರೇಟಿವ್ ಮ್ಯಾನೇಜ್‌ಮೆಂಟ್ ತರಬೇತಿ

**ಬೆಂಗಳೂರು, ಜನವರಿ 04 (ಕರ್ನಾಟಕ ವಾರ್ತೆ):** ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧೀನ ಸಂಸ್ಥೆಯಾದ ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್, ಬೆಂಗಳೂರು ತರಬೇತಿ ಸಂಸ್ಥೆಯ ಮೂಲಕ 6 ತಿಂಗಳ ಅವಧಿಯ **ದೂರಶಿಕ್ಷಣ ಡಿಪ್ಲೊಮಾ ಇನ್ ಕೋ ಆಪರೇಟಿವ್ ಮ್ಯಾನೇಜ್‌ಮೆಂಟ್ ತರಬೇತಿಯನ್ನು ಜನವರಿ 1, 2021 ರಿಂದ ಪ್ರಾರಂಬಿಸಲಾಗಿದೆ.**

ಈ ತರಬೇತಿಯನ್ನು ಸಹಕಾರ ಸಂಘ/ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳು ಅರ್ಜಿ ಸಲ್ಲಿಸಬಹುದಾಗಿದ್ದು ಅರ್ಜಿಯನ್ನು **www.kscfdcm.co.in** ಅನ್‌ಲೈನ್ ಮೂಲಕವೂ ಸಹ ಸಲ್ಲಿಸಬಹುದು. **ಅರ್ಜಿಯನ್ನು ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್, ಸಹಕಾರ ಭವನ, ಬೆಂಗಳೂರು ನಗರ ಜಿಲ್ಲಾ ಸಹಕಾರ ಒಕ್ಕೂಟದ ಕಟ್ಟಡ, ನಂ 1/3, 2ನೇ ಮಹಡಿ, 3ನೇ ಮುಖ್ಯರಸ್ತೆ, ಚಾಮರಾಜಪೇಟೆ, ಬೆಂಗಳೂರು–560018 ಇಲ್ಲಿ ಪಡೆಯಬಹುದು.** ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: **080–26602046, 9902189872, 8861508926 ನ್ನು ಸಂಪರ್ಕಿಸಬಹುದು.**

## ಕಾರ್ಯಾಗಾರ

**ಬೆಂಗಳೂರು, ಜನವರಿ 04 (ಕರ್ನಾಟಕ ವಾರ್ತೆ):** ಧಾರ್ಮಿಕ ಧತ್ತಿ ಇಲಾಖೆಯ ವತಿಯಿಂದ ರಾಜ್ಯದ 26 ಜಿಲ್ಲೆಗಳಲ್ಲಿ ರಾಜ್ಯ ಧಾರ್ಮಿಕ ಪರಿಷತ್ ರಚನೆಯಾಗಿದೆ. ಈ ಪರಿಷತ್ ಎಲ್ಲಾ ಸದಸ್ಯರುಗಳಿಗೆ ಇಲಾಖೆಯ

ಕಾರ್ಯ ವಿಧಾನ, ರೂಪರೇಷೆಗಳು ಹಾಗೂ ಪೂಜಾ ಪದ್ಧತಿಗಳ ಬಗ್ಗೆ ಅರಿವು ಮೂಡಿಸುವ ಸಲುವಾಗಿ "ಕಾರ್ಯಾಗಾರ" ವನ್ನು ಹಮ್ಮಿಕೊಳ್ಳಲಾಗಿದೆ.

ದಿನಾಂಕ 7-01-2021 ರಂದು ಬೆಳಿಗ್ಗೆ 10-00 ಗಂಟೆಗೆ ವಿಧಾನ ಸೌಧ ಬ್ಯಾಂಕ್ವೆಟ್ ಹಾಲ್‌ನಲ್ಲಿ ರಾಜ್ಯದ 34,000 ಕ್ಕೂ ಮೀರಿದ ದೇವಸ್ಥಾನಗಳ ಐತಿಹಾಸಿಕ ಪರಂಪರೆ, ಇತಿಹಾಸ, ಪೂಜಾ ಪದ್ಧತಿ ಇವುಗಳನ್ನು ಪ್ರಚುರಪಡಿಸುವ ಕುರಿತಂತೆ "ಗುಡಿ" ಎಂಬ ಮಾಸ ಪತ್ರಿಕೆಯನ್ನು ಸಹ ಪ್ರಾರಂಭಿಸಲಾಗುವುದು. ಧಾರ್ಮಿಕ ದತ್ತಿ ಇಲಾಖೆ ಇ-ಆಡಳಿತ ಕಚೇರಿಯ ಉದ್ಘಾಟನೆಯ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಜಿಲ್ಲಾ ಧಾರ್ಮಿಕ ಪರಿಷತ್ ಕಾರ್ಯಾಗಾರ, ಗುಡಿ ಮಾಡ ಪತ್ರಿಕೆ ಮತ್ತು ಇ-ಆಡಳಿತ ಕಚೇರಿ ಉದ್ಘಾಟನೆಯನ್ನು 7-1-2021 ರಂದು 10-00 ಗಂಟೆಗೆ ವಿಧಾನ ಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಏರ್ಪಡಿಸಲಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಕನ್ನಡ ಪುಸ್ತಕ ಪ್ರಾಧಿಕಾರದ ಪ್ರಶಸ್ತಿ ಪ್ರದಾನಕ್ಕೆ ಸರ್ವಸಿದ್ಧತೆ

ಕನ್ನಡ ಪುಸ್ತಕ ಪ್ರಾಧಿಕಾರವು ಪ್ರತಿ ವರ್ಷ **"ಅತ್ಯುತ್ತಮ ಪ್ರಕಾಶನ ಪ್ರಶಸ್ತಿ", ``ಡಾ. ಎಂ.ಎಂ. ಕಲಬುರ್ಗಿ ಮಾನವಿಕ ಅಧ್ಯಯನ ಪ್ರಶಸ್ತಿ", "ಡಾ. ಜಿ.ಪಿ.ರಾಜರತ್ನಂ ಸಾಹಿತ್ಯ ಪರಿಚಾರಕ ಪ್ರಶಸ್ತಿ-", "ಡಾ|| ಅನುಪಮ ನಿರಂಜನ ವೈದ್ಯಕೀಯ ಹಾಗೂ ವಿಜ್ಞಾನ ಸಾಹಿತ್ಯ ಪ್ರಶಸ್ತಿ"**ಗಳನ್ನು ನೀಡುತ್ತಾ ಬಂದಿದೆ. ಇದಲ್ಲದೆ ನಾಲ್ಕು **"ಕನ್ನಡ ಪುಸ್ತಕ ಸೊಗಸು ಬಹುಮಾನ", "ಪುಸ್ತಕ ಮುದ್ರಣ ಸೊಗಸು ಬಹುಮಾನ"** ಮತ್ತು **"ಮುಖಪುಟ ಚಿತ್ರ ವಿನ್ಯಾಸ ಬಹುಮಾನ"** ಹಾಗೂ **"ಮುಖಪುಟ ಚಿತ್ರ ಕಲೆಯ ಬಹುಮಾನ"** ಹೀಗೆ ವಿವಿಧ ಬಹುಮಾನಗಳನ್ನು ನೀಡಲಾಗುತ್ತಿದೆ.

ಈ ಸಮಾರಂಭವನ್ನು **ದಿನಾಂಕ:06.01.2021ರಂದು ಬೆಳಿಗ್ಗೆ 11.00ಗಂಟೆಗೆ 'ರವೀಂದ್ರ ಕಲಾಕ್ಷೇತ್ರ', ಜೆ.ಸಿ.ರಸ್ತೆ, ಬೆಂಗಳೂರು - ಇಲ್ಲಿ 2019ನೇ ಸಾಲಿನ ವಿವಿಧ ಪ್ರಶಸ್ತಿ ಹಾಗೂ ಬಹುಮಾನಗಳ** ಪ್ರದಾನ ಸಮಾರಂಭವನ್ನು ಏರ್ಪಡಿಸಲಾಗಿದೆ.

ಈ ಸಮಾರಂಭದಲ್ಲಿ **ಹೆಸರಾಂತ ಸಾಹಿತಿಗಳಾದ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು** ಪ್ರಶಸ್ತಿ, ಬಹುಮಾನ ಪ್ರದಾನ ಮಾಡಲಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀಮತಿ ವಿ. ರಶ್ಮೀ ಮಹೇಶ್ ಭಾ.ಆ.ಸೇ ಅವರು **"ದರ್ಪಣ"** ಕಿರುಹೊತ್ತಿಗೆ ಬಿಡುಗಡೆ ಮಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕನ್ನಡ ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಎಫ್.ಸಿ.ಎ., ಕ.ಆ.ಸೇ ಅವರುಗಳು ಭಾಗವಹಿಸಲಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರದ ಮಾನ್ಯ ಅಧ್ಯಕ್ಷರಾದ ಡಾ. ಎಂ.ಎನ್. ನಂದೀಶ್ ಹಂಚೆ ಅವರು ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ.

ಪ್ರಶಸ್ತಿ ಪುರಸ್ಕೃತರ ವಿವರ

| ಪ್ರಶಸ್ತಿ ವಿವರ | ಮೊತ್ತ | ಪ್ರಶಸ್ತಿ ವಿಜೇತರು |
|---|---|---|
| **ಅತ್ಯುತ್ತಮ ಪ್ರಕಾಶನ ಪ್ರಶಸ್ತಿ** | **ರೂ.1,00,000-00** | **ಐ.ಬಿ.ಎಚ್.ಪ್ರಕಾಶನ,** ಬೆಂಗಳೂರು |
| **ಡಾ. ಎಂ. ಎಂ. ಕಲಬುರ್ಗಿ ಮಾನವಿಕ ಅಧ್ಯಯನ ಪ್ರಶಸ್ತಿ** | **ರೂ.75,000-00** | **ಡಾ. ಬಸವರಾಜ ಕಲ್ಗುಡಿ,** ಬೆಂಗಳೂರು |
| **ಡಾ. ಜಿ.ಪಿ. ರಾಜರತ್ನಂ ಸಾಹಿತ್ಯ ಪರಿಚಾರಕ ಪ್ರಶಸ್ತಿ** | **ರೂ.50,000-00** | **ಡಾ. ಎಂ. ಎಂ. ಪಡಶೆಟ್ಟಿ,** ಸಿಂದಗಿ<br>**ಶ್ರೀ ಕೆ. ರಾಜಕುಮಾರ್,** ಬೆಂಗಳೂರು |
| **ಡಾ|| ಅನುಪಮಾ ನಿರಂಜನ ವೈದ್ಯಕೀಯ ಹಾಗೂ ವಿಜ್ಞಾನ ಸಾಹಿತ್ಯ ಪ್ರಶಸ್ತಿ** | **ರೂ.25,000-00** | **ಡಾ|| ಬಿ.ಎಂ. ಹೆಗ್ಡೆ,** ಮಂಗಳೂರು |

**ಪುಸ್ತಕ ಸೊಗಸು ಹಾಗೂ ಮುದ್ರಣ ಸೊಗಸು ಬಹುಮಾನಿತರ ವಿವರ**

| ಬಹುಮಾನದ ವಿವರ | ಬಹುಮಾನದ ಮೊತ್ತ | ಬಹುಮಾನಿತ ಕೃತಿ | ಪ್ರಕಾಶಕರು / ಮುದ್ರಕರು / ಕಲಾವಿದರು |
|---|---|---|---|
| ಮೊದಲನೇ ಬಹುಮಾನ | 25,000-00 | ಡಾ. ಬಿ.ಆರ್. ಅಂಬೇಡ್ಕರ್ ಮಹಾಮಾನವನ ಮಹಾಯಾನ | ಸಪ್ನ ಬುಕ್ ಹೌಸ್, ಬೆಂಗಳೂರು |
| ಎರಡನೇ ಬಹುಮಾನ | 20,000-00 | ಭೂಮಿಯೊಂದು ಮಹಾಬೀಜ | ನಮ್ಮ ಪ್ರಕಾಶನ, ತುಮಕೂರು |
| ಮೂರನೇ ಬಹುಮಾನ | 10,000-00 | ಬಂಗಾರದ ಮನುಷ್ಯರು - ಬೆಳಕಿನ ಬೇಸಾಯದ ಕಥಾನಕ | ಅಭಿರುಚಿ ಪ್ರಕಾಶನ, ಮೈಸೂರು |
| ಮಕ್ಕಳ ಪುಸ್ತಕ ಸೊಗಸು ಬಹುಮಾನ | 8,000-00 | ಅರಳುವ ಹೂಗಳು | ಚೈತ್ರೋದಯ ಪ್ರಕಾಶನ, ಹಾಸನ |

| | | | |
|---|---|---|---|
| ಮುಖಪುಟ ಚಿತ್ರ ವಿನ್ಯಾಸ ಬಹುಮಾನ | 10,000-00 | ಸೋತ ಕಣ್ಣುಗಳನ್ನು ಮಿಟುಕಿಸುವ ಮಧ್ಯಾಹ್ನ | ಶ್ರೀ ಕಿರಣ್ ಮಾಡಾಲು, ಬೆಂಗಳೂರು |
| ಮುಖಪುಟ ಚಿತ್ರ ಕಲೆಯ ಬಹುಮಾನ | 8,000-00 | ಮಹಾವೃಕ್ಷ | ಶ್ರೀ ಪುಂಡಲೀಕ ಕಲ್ಲಿಗನೂರು, ಗದಗ ಜಿಲ್ಲೆ |
| ಪುಸ್ತಕ ಮುದ್ರಣ ಸೊಗಸು ಬಹುಮಾನ | 5,000-00 | ವನ್ಯವರ್ಣ | ಆಕೃತಿ ಪ್ರಿಂಟ್ಸ್, ಮಂಗಳೂರು |

ಸಮಾರಂಭದಲ್ಲಿ ಭಾಗವಹಿಸುವವರು ಕಡ್ಡಾಯವಾಗಿ ಕೋವಿಡ್-19ರ ನಿಯಮವನ್ನು ಪಾಲಿಸಬೇಕಾಗಿ ಕೋರಿದೆ.

## ಲೇಖನ ಸ್ಪರ್ಧೆ

ಬೆಂಗಳೂರು, ಡಿಸೆಂಬರ್ 04 (ಕರ್ನಾಟಕ ವಾರ್ತೆ):

ನಾಡು ಕಂಡ ಶ್ರೇಷ್ಠ ವಿದ್ವಾಂಸ, ಸಾಹಿತ್ಯ ಲೋಕದ ಸುಪ್ರಸಿದ್ಧ ಲೇಖಕ ಹಾಗೂ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಸಂಸ್ಥಾಪಕ ಸದಸ್ಯರೊಬ್ಬರಾಗಿದ್ದ ದಿ. ಪ್ರೊ. ಜೆ.ಆರ್. ಲಕ್ಷ್ಮಣರಾವ್ ಅವರ ಜನ್ಮ ಶತಮಾನೋತ್ಸವ (21.1.1921–21.01.2021)ವನ್ನು ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ ಹಾಗೂ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ ಅವರುಗಳ ಸಹಯೋಗದೊಂದಿಗೆ ಆಚರಿಸಲಾಗುತ್ತಿದೆ.

ಪ್ರೊ. ಜೆ. ಆರ್. ಲಕ್ಷ್ಮಣ್‌ರಾವ್ ಅವರ ಜನ್ಮ ಶತಮಾನೋತ್ಸವ ಹಿನ್ನೆಲೆಯಲ್ಲಿ ಜೀವನ ಚರಿತ್ರೆ, ಸಾಧನೆ ಹಾಗೂ ಅವರ ಕೃತಿಗಳ ಕುರಿತಾಗಿ ನಾಡಿನ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ವಿಜ್ಞಾನ ಆಸಕ್ತರಿಂದ ಲೇಖನಗಳನ್ನು ಆಹ್ವಾನಿಸಲಾಗಿದೆ. ಆಸಕ್ತರು ತಮ್ಮ ಲೇಖನಗಳನ್ನು ಗೌರವ ಕಾರ್ಯದರ್ಶಿ, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ವಿಜ್ಞಾನ ಭವನ, ನಂ.24/2, 21ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು ಪೋಸ್ಟ್/ಕೊರಿಯರ್/ಇ–ಮೇಲ್

(krvp.info@gmail.com) ಮೂಲಕ ಜನವರಿ 15 ರೊಳಗಾಗಿ ಕಳುಹಿಸಬಹುದಾಗಿದೆ. ಆಯ್ದ ಅತ್ಯುತ್ತಮ 5 ಲೇಖನಗಳಿಗೆ ಸೂಕ್ತ ಬಹುಮಾನ, ಪ್ರಶಸ್ತಿ ಪತ್ರ ಹಾಗೂ ಭಾಗವಹಿಸಿದ ಎಲ್ಲರಿಗೂ ಅಭಿನಂದನಾ ಪತ್ರ ನೀಡಲಾಗುವುದು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಕನ್ನಡೇತರರಿಗೆ ಕನ್ನಡ ಕಲಿಸುವ ಶಿಕ್ಷಕರ ತರಬೇತಿ ಕಾರ್ಯಾಗಾರ

**ಬೆಂಗಳೂರು:** ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಬೆಂಗಳೂರು ನಗರದಲ್ಲಿರುವ ಕನ್ನಡ ಬಾರದ ನಾಗರಿಕರಿಗೆ ಕನ್ನಡ ಭಾಷೆಯನ್ನು ಕಲಿಸುವ ಕಾರ್ಯಕ್ಕೆ ಪುನಶ್ಚೇತನ ನೀಡುತ್ತಿದೆ. ಇದರ ಅಂಗವಾಗಿ ಆಧುನಿಕ, ವೈಜ್ಞಾನಿಕ ವಿಧಾನದಲ್ಲಿ ವಿಶಿಷ್ಟವಾಗಿ ಕನ್ನಡೇತರರಿಗೆ ಕನ್ನಡ ಭಾಷಾ ಕೌಶಲ್ಯಗಳನ್ನು ಕಲಿಸುವ ಕುರಿತು ಶಿಕ್ಷಕರುಗಳಿಗೆತರಬೇತಿ ಕಾರ್ಯಶಿಬಿರಗಳನ್ನು ಆಯೋಜಿಸಲಾಗುತ್ತಿದೆ.

ಕನ್ನಡ/ಭಾಷಾವಿಜ್ಞಾನ ಅಥವಾ ಇನ್ನಾವುದೇ ಕನಿಷ್ಠ ಪದವಿಯ ವಿದ್ಯಾರ್ಹತೆಯುಳ್ಳ ಆಸಕ್ತಿಹೊಂದಿರುವ ಮಹಿಳೆಯರು/ಪುರುಷರು ಈ “ಶಿಕ್ಷಕರ ತರಬೇತಿ”ಯಲ್ಲಿ ಭಾಗವಹಿಸಬಹುದಾಗಿದೆ. ಈ ಕಾರ್ಯಶಿಬಿರದಲ್ಲಿ ಯಶಸ್ವಿಯಾದವರನ್ನು ಪ್ರಾಧಿಕಾರದ ಕನ್ನಡ ಕಲಿಕಾ ಯೋಜನೆಯ ಅಡಿಯಲ್ಲಿ ಸೂಕ್ತ ಸಂಭಾವನೆ ಸಹಿತ ತರಗತಿಗಳನ್ನು ನಡೆಸಲು ನಿಯೋಜಿಸಲಾಗುವುದು. ಶಿಬಿರವು ಜನವರಿ 15,16 ಮತ್ತು 23ರಂದು ನಡೆಯಲಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **10 ಜನವರಿ 2021. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 080-22286773 / 9845299621/ 8884211140** ಪ್ರಾಧಿಕಾರದ ಜಾಲತಾಣ https://kannadapraadhikaara.karnataka.gov.in/ ಮೂಲಕ ಪ್ರವೇಶಕ್ಕೆ ಅರ್ಜಿ ಸಲ್ಲಿಸುವುದು.

## Karnataka State Pollution Control Board
## ParisaraBhavan, Bengaluru
## AQI of the CAAQM stations established in Bengaluru City
## Date :4.1.2021

| Sl. No. | Station | AQI | Category | Prominent Pollutant |
|---|---|---|---|---|
| 1 | Veterinary College | 72 | Satisfactory | $PM_{10}$ |

| | | | | |
|---|---|---|---|---|
| | Hebbal | | | |
| 2 | Jayanagar 5th Block, Shalini ground | 72 | Satisfactory | $PM_{2.5}$ |
| 3 | KAVIKA, Mysore Road | 63 | Satisfactory | $PM_{.2.5}$ |
| 4 | Rajeev Gandhi Institute of Chest Disease, NIMHANS, Hombegowda Nagar | 57 | Satisfactory | $O_3$ |
| 5 | HSR Layout, near Central Silkboard | 57 | Satisfactory | $PM_{2.5}$ |
| 6 | City Railway Station, Magestic, Bengaluru | 98 | Satisfactory | $PM_{10}$ |
| 7 | Saneguruvanahalli, NisargaBhavan, KSPCB, Shivanagara | 89 | Satisfactory | $PM_{10}$ |
| 8 | BWSSB, Kadabesanahalli | * | * | * |
| 9 | Peenya | 58 | Satisfactory | $O_3$ |
| 10 | BTM Layout | * | * | * |

| **Category (Range)** | **Possible Health Impacts** | **Category (Range)** | **Possible Health Impacts** |
|---|---|---|---|
| Good (0–50) | Minimal Impact | Poor (201–300) | Breathing discomfort to people on prolonged exposure |
| Satisfactory (51–100) | Minor breathing discomfort to sensitive people | Very Poor (301–400) | Respiratory illness to the people on prolonged exposure |
| Moderate (101–200) | Breathing discomfort to the people with lung, Heart disease, children and older | Severe (>401) | Respiratory effects even on healthy people |

# ಕರ್ನಾಟಕರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

## ಪರಿಸರ ಭವನ, ಬೆಂಗಳೂರು.

### ಬೆಂಗಳೂರು ನಗರದಲ್ಲಿ ಸ್ಥಾಪಿಸಿರುವ ನಿರಂತರ ಪರಿವೇಕ್ಷಕ ವಾಯುಗುಣಮಟ್ಟ ಮಾಪನ ಕೇಂದ್ರಗಳ ವಾಯುಗುಣಮಟ್ಟ ಸೂಚ್ಯಂಕ (AQI), ಬೆಂಗಳೂರು

**ದಿನಾಂಕ: 4.1.2021**

| ಕ್ರಮ ಸಂಖ್ಯೆ | ಮಾಪನ ಕೇಂದ್ರಗಳ ಹೆಸರು | ವಾಯುಗುಣಮಟ್ಟ ಸೂಚ್ಯಂಕ (AQI) | ವರ್ಗ | ಪ್ರಮುಖ ಮಾಲಿನ್ಯಕಾರಕ |
|---|---|---|---|---|
| 1 | ಪಶುವೈದ್ಯಕೀಯಕಾಲೇಜು, ಹೆಬ್ಬಾಳ | 72 | ತೃಪ್ತಿಕರ | $PM_{.10}$ |
| 2 | ಜಯನಗರ 5ನೇ ಬ್ಲಾಕ್, ಶಾಲಿನಿ ಮೈದಾನ | 72 | ತೃಪ್ತಿಕರ | $PM_{2.5}$ |
| 3 | ಕವಿಕ, ಮೈಸೂರುರಸ್ತೆ | 63 | ತೃಪ್ತಿಕರ | $PM_{.2.5}$ |
| 4 | ರಾಜೀವ್‌ಗಾಂಧಿಎದೆರೋಗಗಳ ಸಂಸ್ಥೆ, ನಿಮ್ಹಾನ್ಸ್ ಹೊಂಬೆಗೌಡನಗರ | 57 | ತೃಪ್ತಿಕರ | $O_3$ |
| 5 | ಹೆಚ್.ಎಸ್.ಆರ್ ಲೇಔಟ್, ಕೇಂದ್ರರೇಷ್ಮೆ ಮಂಡಳಿ ಹತ್ತಿರ | 57 | ತೃಪ್ತಿಕರ | $PM_{2.5}$ |
| 6 | ನಗರರೈಲ್ವೆ ನಿಲ್ದಾಣ, ಮೆಜೆಸ್ಟಿಕ್, ಬೆಂಗಳೂರು | 98 | ತೃಪ್ತಿಕರ | $PM_{10}$ |
| 7 | ಸಾಣೆಗುರುವನಹಳ್ಳಿ, ನಿಸರ್ಗ ಭವನ, ಕರ್ನಾಟಕರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಶಿವನಗರ | 89 | ತೃಪ್ತಿಕರ | $PM_{10}$ |
| 8 | BWSSB, ಕಾಡಬೀಸನಹಳ್ಳಿ | * | * | * |
| 9 | ಪೀಣ್ಯ | 58 | ತೃಪ್ತಿಕರ | $O_3$ |
| 10 | ಬಿಟಿಎಂ ಲೇಔಟ್ | * | * | * |

| ವರ್ಗ(ಶ್ರೇಣಿ) | ಉಂಟಾಗಬಹುದಾದಆರೋಗ್ಯ ಪರಿಣಾಮಗಳು |
|---|---|
| **ಉತ್ತಮ (0–50)** | ಕನಿಷ್ಠ ಪರಿಣಾಮ |
| **ತೃಪ್ತಿಕರ (51–100)** | ಸೂಕ್ಷ್ಮ ಜನರಿಗೆ ಸಣ್ಣ ಉಸಿರಾಟದ ಅಸ್ವಸ್ಥತೆ |
| **ಸಾಧಾರಣ (101–200)** | ಶ್ವಾಸಕೋಶ, ಹೃದಯಕಾಯಿಲೆಯವರು, ಮಕ್ಕಳು ಮತ್ತು ಹಿರಿಯ ವಯಸ್ಕರಿಗೆ ಉಸಿರಾಟದ ಅಸ್ವಸ್ಥತೆ |
| **ಕಳಪೆ (201–300)** | ದೀರ್ಘಕಾಲಿಕಒಡ್ಡುವಿಕೆಯಿಂದಜನರಿಗೆ ಉಸಿರಾಟದ ಅಸ್ವಸ್ಥತೆ |
| **ಅತಿ ಕಳಪೆ (301–400)** | ದೀರ್ಘಕಾಲಿಕಒಡ್ಡುವಿಕೆಯಿಂದಜನರಿಗೆ ಶ್ವಾಸಕೋಶದಅಸ್ವಸ್ಥತೆ |

| | |
|---|---|
| **ತೀವ್ರ (>401)** | ಆರೋಗ್ಯವಂತಜನರಿಗೂ ಉಸಿರಾಟದ ಅಸ್ವಸ್ಥತೆ |